





ವಾಹನ ಚಾಲನೆ ಮಾಡುವುದೇ ದೊಡ್ಡ ಸವಾಲು. ‘ಈ ಕಚ್ಚಾ ರಸ್ತೆಗೆ ಡಾಂಬರು ಹಾಕೋಕೆ ಆಗಲ್ಲವಾ’ ಎಂದು ಸಹ ಪ್ರಯಾಣಿಕರೊಬ್ಬರು ಅಂದಾಗ, ‘ಟಾರ್ ರೋಡ್ ಆದ್ರೆ ಏನ್ ಮಜಾ ಇರುತ್ತೆ ಸಾರ್. ಈ ಆಫ್ ರೋಡಲ್ಲಿ ಹೋಗೊ ಮಜವೇ ಬೇರೆ’ ಎಂದು ಚಾಲಕ ಚೇತನ್ ಕಲ್ಲಿನ ಹಾದಿಯನ್ನು ಸಮರ್ಥಿಸಿಕೊಂಡ.

ಭದ್ರಾ ಹುಲಿ ಸಂರಕ್ಷಿತ ಪ್ರದೇಶವಾದ ಆ ಕಾಡು ಹಾದಿಯ ಅಕ್ಕಪಕ್ಕ ಕಾಣುತ್ತಿದ್ದ ಹಸಿರು ಮೈದಾನ, ಇಳಿಜಾರಿನ ಕಣಿವೆ, ದೂರದಲ್ಲಿ ಕಾಣುತ್ತಿದ್ದ ಬೂದು ಬಣ್ಣದ ಗುಡ್ಡ, ವನರಾಶಿ ಕಣ್ಣಿಗೆ ಹಬ್ಬವನ್ನುಂಟು ಮಾಡಿದವು. ಇಲ್ಲಿಂದ ಒಂದು ಕಿ.ಮೀ. ನಡೆದುಕೊಂಡು ಹೋದರೆ ಜಲಪಾತ ಸಿಗುತ್ತದೆ ಎಂದು ಹೇಳಿದ ಚಾಲಕ ನಮ್ಮನ್ನು ಜೀಪ್‌ನಿಂದ ಇಳಿಸಿದ. ಬೇಸಿಗೆಯಲ್ಲೂ ಹಸಿರು ಚಿಮ್ಮುತ್ತಿದ್ದ ಕಾನನದೊಳಗೆ ಹೆಜ್ಜೆ ಹಾಕುತ್ತಿದ್ದರೆ, ಕಾಡಿನ ನೀರವ ಮೌನ, ಹಕ್ಕಿಗಳ ಚಿಲಿಪಿಲಿ, ತಣ್ಣನೆಯ ಗಾಳಿ ಆಯಾಸವನ್ನು ಮರೆಸಿದವು. ಸ್ವಲ್ಪ ದೂರ ಸಾಗಿದ ಮೇಲೆ ಜಲಪಾತದಿಂದ ಹರಿದು ಬರುತ್ತಿದ್ದ ನೀರು ಹೊಳೆಯಾಗಿ ಹರಿಯುತ್ತಿತ್ತು. ನೀರಿನಲ್ಲಿ ಕಾಲು ತೋಯಿಸಿಕೊಂಡು, ಜಲಪಾತದತ್ತ ಓಡಿದೆವು.

## ಸೃಷ್ಟಿಗೆ ಸೌಂದರ್ಯದ ಬೊಟ್ಟು

ಹಸಿರು ಚಿಮ್ಮುವ ಕಾನನದ ಮಧ್ಯೆ ಕ್ಷೀರಧಾರೆಯಂತೆ ಎರಡು ಮಜಲುಗಳಲ್ಲಿ ಹೆಬ್ಬೆ ಜಲಪಾತ 250 ಅಡಿ ಎತ್ತರದಿಂದ ಧುಮ್ಮಿಕ್ಕುತ್ತಿತ್ತು. ಕಪ್ಪು ಶಿಲೆಗಳು ಜಲಪಾತದ ಬಣ್ಣವನ್ನು ಇಮ್ಮಡಿಗೊಳಿಸಿದ್ದವು. ಜಲಪಾತದ ಕೆಳಗೆ ನೈಸರ್ಗಿಕವಾಗಿ ಸೃಷ್ಟಿಯಾಗಿರುವ ಕೊಳದಲ್ಲಿ ಪ್ರವಾಸಿಗರು ಮಿಂದೆದ್ದರು. ಯುವಕರು ಬಂಡೆಗಳ ಮೇಲೇರಿ ಜಲಪಾತದ ನೀರಿಗೆ ತಲೆಯೊಡ್ಡುತ್ತಾ ಕುಣಿದು ಕುಪ್ಪಳಿಸಿದರು. ತಣ್ಣನೆಯ ನೀರು ಮೈಮನಕ್ಕೆ ಉಲ್ಲಾಸ ನೀಡಿತು. ಇಲ್ಲಿ ಸುರಿಯುವ ನೀರು ಭದ್ರಾ ಹಿನ್ನೀರಿನಲ್ಲಿ ಲೀನವಾಗುತ್ತದೆ. ಬೇಸಿಗೆಯಲ್ಲೂ ಧಾರಾಕಾರವಾಗಿ ಸುರಿಯುತ್ತಿದ್ದ ಜಲಪಾತದ ಸೊಬಗನ್ನು ನೋಡುತ್ತಿದ್ದ ಕ್ಷಣ ‘ಇಳಿದು ಬಾ ತಾಯೆ ಇಳಿದು ಬಾ’ ಎಂಬ ಬೇಂದ್ರೆಯವರ ಕವನ ಮನಸ್ಸಿನಲ್ಲಿ ಹಾದು ಹೋಯಿತು.

ಬೇಸಿಗೆಯಲ್ಲಿ ನೀರು ಕಡಿಮೆ ಇರುವುದರಿಂದ ಆಟವಾಡಲು ಚೆನ್ನಾಗಿರುತ್ತದೆ. ಮಳೆಗಾಲದಲ್ಲಿ ಇದರ ಆರ್ಭಟ ನೋಡಲು ಎಂಟೆದೆ ಬೇಕು ಎಂಬ ಮಾತು ಅಕ್ಷರಶಃ ಸತ್ಯ.

## ಹೋಗುವುದು ಹೇಗೆ?

ಚಿಕ್ಕಮಗಳೂರಿನಿಂದ 62 ಕಿ.ಮೀ. ದೂರದಲ್ಲಿರುವ ಹೆಬ್ಬೆ ಜಲಪಾತಕ್ಕೆ, ತರೀಕೆರೆ ರಸ್ತೆ ಮಾರ್ಗದಲ್ಲಿ ಚಲಿಸಿ, ಕೆಮ್ಮಣ್ಣುಗುಂಡಿಗೆ ಹೋಗುವ ಹಾದಿಯಲ್ಲಿ ಸಾಗಬೇಕು. ಕೆಮ್ಮಣ್ಣುಗುಂಡಿ 2 ಕಿ.ಮೀ. ಇರುವಾಗ, ಬಲಕ್ಕೆ ಸಿಗುವ ಅರಣ್ಯ ತನಿಖಾ ಠಾಣೆಯ ಸಮೀಪವಿರುವ ಜೀಪ್‌ಗಳ ಮೂಲಕ 8 ಕಿ.ಮೀ. ಪ್ರಯಾಣಿಸಬೇಕು.

ಬೆಂಗಳೂರು, ಹುಬ್ಬಳ್ಳಿ ಕಡೆಯಿಂದ ರೈಲಿನಲ್ಲಿ ಬರುವ ಪ್ರವಾಸಿಗರು ಬೀರೂರು ರೈಲ್ವೆ ನಿಲ್ದಾಣದಲ್ಲಿ ಇಳಿದು, ಅಲ್ಲಿಂದ ಖಾಸಗಿ ವಾಹನಗಳ ಮೂಲಕ ಲಿಂಗದಹಳ್ಳಿ ಮಾರ್ಗವಾಗಿ ಹೆಬ್ಬೆ ಜಲಪಾತಕ್ಕೆ ಬರಬಹುದು. ಇಲ್ಲಿಗೆ ನೇರ ಸಾರಿಗೆ ಬಸ್‌ಗಳ ಸೌಲಭ್ಯವಿಲ್ಲ.

ಮಳೆಗಾಲದಲ್ಲಿ ಜಿಗಣೆ ಕಾಟ ಇರುವುದರಿಂದ ಪ್ರವಾಸಿಗರು ಎಚ್ಚರವಹಿಸಬೇಕು. ಊಟ, ತಿಂಡಿಗೆ ಜಲಪಾತದ ಬಳಿ ಯಾವುದೇ ಅಂಗಡಿ, ಹೋಟೆಲ್‌ಗಳಿಲ್ಲ. 10 ಕಿ.ಮೀ. ದೂರದಲ್ಲಿರುವ ಕೆಮ್ಮಣ್ಣುಗುಂಡಿಯಲ್ಲಿ ಹೋಟೆಲ್ ಮತ್ತು ವಸತಿಗೃಹಗಳ ಸೌಲಭ್ಯವಿದೆ.

## ಸುತ್ತಮುತ್ತಲಿನ ತಾಣಗಳು

ಕಲ್ಲತ್ತಗಿರಿ ಜಲಪಾತ, ಪ್ರಸಿದ್ಧ ಗಿರಿಧಾಮ ಕೆಮ್ಮಣ್ಣುಗುಂಡಿ, ಕರ್ನಾಟಕದ ಎತ್ತರದ ಪರ್ವತ ಶಿಖರ ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ದಬೆ ದಬೆ ಜಲಪಾತ, ಬಾಬಾ ಬುಡನ್‌ಗಿರಿ ಇನ್ನೂ ಮುಂತಾದ ಪ್ರದೇಶಗಳನ್ನು ನೋಡಬಹುದು.